ಇದ್ದರೂ ಲಿಂಗ ತಾನೇ ಧೈರ್ಯವಾಗಿ ಹೋಗಿ ದೋಣಿ ತಂದು ಸಿದ್ಧಪಡಿಸುತ್ತಾನೆ. ಸಣ್ಣೇಗೌಡರ ಮನೆಯಿಂದ ಎಲ್ಲರೂ ದೋಣಿಯಲ್ಲಿ ಸುರಕ್ಷಿತ ಸ್ಥಳಕ್ಕೆ ಹೊರಡುವಾಗ, ದೋಣಿಯಲ್ಲಿ ಜಾಗವಿಲ್ಲವಾಗುತ್ತದೆ. ಲಿಂಗ ದೋಣಿಯೇರದೇ ದೂರ ನಿಲ್ಲುತ್ತಾನೆ. ಆಗ ಸಣ್ಣೇಗೌಡರೇ ಒತ್ತಾಯದಿಂದ ಅವನನ್ನೂ ದೋಣಿ ಹತ್ತಿಸಿಕೊಳ್ಳುತ್ತಾರೆ. ಇನ್ನೇನು ಮುಳುಗೇ ಬಿಡುತ್ತದೆ ಎಂಬಂತಿದ್ದ ದೋಣಿಯು ತೇಲುತ್ತ ಸಾಗುವಾಗ–ಲಿಂಗನಿಗೆ ಪರಿಸ್ಥಿತಿಯು ಕೈ ಮೀರುತ್ತಿರುವುದು ಅರಿವಿಗೆ ಬರುತ್ತದೆ. ದೋಣಿಯಲ್ಲಿದ್ದ ಹೆಂಗಸರು ಮಕ್ಕಳು, ಪ್ರವಾಹದ ತೆರೆಗಳು ಬಡಿಯುತ್ತಿದ್ದಂತೆಯೇ 'ರಾಮ ರಾಮ' ಎಂದು ಬೊಬ್ಬಿಡುವ ಸ್ಥಿತಿಯು ಓದುಗರ ಮನ ಕಲಕುವಂತೆ ಮಾಡುತ್ತದೆ. ಹುಟ್ಟು ಹಾಕುತ್ತಿದ್ದ ಲಿಂಗನ ಅಂತರಂಗವನ್ನೇ ಅದು ಪ್ರತಿಫಲಿಸಿದಂತೆ ಭಾಸವಾಗುತ್ತದೆ. ಈ ದೋಣಿಗೆ ತಾನೇ ಭಾರ ಎಂದು ಅವನೇ ನಿರ್ಣಯಿಸಿಕೊಳ್ಳುತ್ತಾನೆ. ತನಗೆ ಅನ್ನ ನೀಡಿದವರ ಜೀವ ಉಳಿಸುವ ಋಣ ತನ್ನ ಮೇಲಿದೆ ಎಂದು ತಾನೇ ನಿರ್ಣಯಿಸಿ, ಪ್ರವಾಹದ ರಾತ್ರಿಯಲ್ಲಿ ಜೀವದ ಹಂಗು ತೊರೆದು ನದಿಗೆ ಹಾರುವ ಸಂದರ್ಭ ಹೃದಯ ವಿದ್ರಾವಕ ಸ್ಥಿತಿಯಂತೆ ಕಾಣುತ್ತದೆ.

ಲಿಂಗ ನೆರೆಯ ನೀರಿನಲ್ಲಿರುವ ದೋಣಿ ಹುಡುಕಿ ತಂದು ಅನ್ನದಾತರ ಪ್ರಾಣ ಉಳಿಸಬೇಕೆಂದು ಪಣ ತೊಡುವ ರೀತಿ, ಯಾವ ಸೈನಿಕನ ಬದುಕಿಗೂ ಕಡಿಮೆ ಇಲ್ಲ. ಮಳೆ- ಚಳಿ- ಬಿಸಿಲೆನ್ನದೆ ಶತ್ರು ದಾಳಿಗೆ ಎದೆಗೊಟ್ಟು ಹೋರಾಡುವ ದೇಶದ ಸೈನಿಕರ ಅಂತರ್ಯವನ್ನೊಮ್ಮೆ ಇದು ತಾಕಬಲ್ಲದು. ಆ ಅಪರಾತ್ರಿ ಅಪಾಯಕಾರಿಯಾಗಿ ಹರಿಯುತ್ತಿದ್ದ ನದಿಯಲ್ಲಿ ದೋಣಿ ಓಲಾಡುತ್ತಿದ್ದರೂ ಧಣಿಯ ಮನೆಯವರು ದೋಣಿಗೆ ಹೆಚ್ಚಾದರು ಎಂದು ಹೇಳಿಕೊಳ್ಳುವ ಸ್ವಭಾವ ಲಿಂಗನದ್ದಲ್ಲ. ಕೊನೆಗೆ ದೋಣಿಯಿಂದ ಯಾರೊಬ್ಬರೂ ಇಳಿಯದೇ ಇದ್ದರೂ ನೀರಿನ ಸಂಗಡ ಬಚಾವಾಗಲು ದಾರಿಯಿಲ್ಲ ಎನ್ನುವಾಗ ನಿಸ್ವಾರ್ಥವಾಗಿ- ಅಪಾಯವನ್ನು ನಿರೀಕ್ಷಿಸಿ ಒಡೆಯನ ಬದುಕು ಚೆನ್ನಾಗಿರಲಿ ಎಂಬ ಏಕ ಉದ್ದೇಶದಿಂದ ಅಥವಾ ಸ್ವಾಮಿ ನಿಷ್ಠೆಯಿಂದ ನದಿಗೆ ಹಾರಿ ಬಿಡುವ ಲಿಂಗ ಅಕ್ಷರಶಃ ನಿದ್ರೆಯಲ್ಲೂ ಅತೀವವಾಗಿ ಕಾಡುತ್ತಾನೆ. ಕೊನೆಯ ಕ್ಷಣದಲ್ಲಿ ಅವನ ಕಣ್ಣಮುಂದೆ ಮಗನ ಮುಖ ಬಂದು, ಒಂದ್ಹೆಜ್ಜೆ ಹಿಂದೆ ಸರಿಯುತ್ತಾನೆ. ಆದರೆ ಮರುಕ್ಷಣವೇ ತಾನು ನದಿಗೆ ಹಾರುವುದೇ ಕ್ಷೇಮವೆಂದು ಗಟ್ಟಿ ಮನಸ್ಸು ಮಾಡಿ 'ರಾಮ ರಾಮ' ಎನ್ನುತ್ತ ನದಿಗೆ ಹಾರಿಯೇ ಬಿಡುತ್ತಾನೆ. ದೋಣಿಯಲ್ಲಿ ಉಳಿದ ಜನರ ಸಾವು–ಬದುಕಿನ ಹೋರಾಟದ ಮಧ್ಯೆ ಅವನು ತನ್ನ ಮಗನನ್ನು ಒಂಟಿಯಾಗಿಸಿ ಹೊರಡುವ ಸನ್ನಿವೇಶ ಆರ್ದ್ರವಾಗಿದೆ.

ಅತ್ತ ದೋಣಿ ಕ್ಷೇಮವಾಗಿ ದಡ ಸೇರಿದ ಮೇಲೆ ಗೌಡರು ಲಿಂಗ ಕಾಣೆಯಾಗಿರುವುದನ್ನು ಗಮನಿಸಿ ಕಂಗಾಲಾಗುತ್ತಾರೆ. ನಮ್ಮ ಮನೆಯ ಬೆಳಕೇ ನಂದಿ ಹೋಯಿತು ಎಂದು ರೋದಿಸುತ್ತಾರೆ. ಲಿಂಗನ ಪ್ರಾಮಾಣಿಕತೆ, ಸ್ವಾಮಿನಿಷ್ಠೆಯು ಅವರಲ್ಲಿ ಪ್ರೀತಿಯ ಎಳೆಯನ್ನು ಚಿಗುರಿಸಿತ್ತೇ? ಆದರೆ ಲಿಂಗನಿಗೆ ಅದ್ಯಾವುದರ ಗೊಡವೆಯೇ ಇಲ್ಲ. ಕೊನೆಗೆ ಲಿಂಗ ಎರಡು ದಿನಗಳ ನಂತರ ಪ್ರವಾಹದಲ್ಲಿ ಹೇಗೋ ಈಜಿ ಹಿಂದಿರುಗಿ ಬರುತ್ತಾನೆ. ತನ್ನದೇನೋ ದೊಡ್ಡ ಸಾಧನೆ ಎಂಬ ಹಮ್ಮು ಇಲ್ಲದೆ ಮನೆಯ ಮುಂದೆ ನಿಲ್ಲುತ್ತಾನೆ. ಮನೆಯವರೆಲ್ಲ ಅವನನ್ನು ಅಕ್ಕರೆಯಿಂದ ಬರಮಾಡಿಕೊಳ್ಳುತ್ತಾರೆ. ಅವನೋ, ಧಣಿಯವರ ಮುಂದೆ ಸಲೀಸಾಗಿ ತನ್ನದೇನೂ ದೊಡ್ಡ ತ್ಯಾಗವಿಲ್ಲವೆಂಬಂತೆ, 'ದೋಣಿಯ ಏರಿಳಿತಕ್ಕೆ ಮಗುಚಿ ಬಿದ್ದೆ ಒಡೆಯಾ' ಎಂದು ಹೇಳಿಕೊಳ್ಳುತ್ತಾನೆ. 'ಹುಟ್ಟು ಹಾಕುತ್ತಿದ್ದೆ. ಒಂದೇ ಸಲ ದೋಣಿ ಮೇಲೆ ಕೆಳಗಾಗಲಿಲ್ಲವೇ? ಆಗ ಮುಗ್ಗರಿಸಿ ಹೊಳೆಗೆ ಬಿದ್ದೆ' ಎಂದು ಮಾತಿನಲ್ಲೇ ಜಾರಿಕೊಳ್ಳುತ್ತಾನೆ. ಅವನ ಮುಜುಗರ ಮಾತಿನಲ್ಲೇ ತನ್ನನ್ನು ಯಾರೂ ದೊಡ್ಡ ವೀರನಂತೆ ಬಿಂಬಿಸಬೇಡಿ ಎಂಬಂತಿತ್ತು. 'ಏನೋ ನಿಮ್ಮನ್ನದ ಋಣ ಇತ್ತು' ಎಂದು ಹೇಳುತ್ತ ಮಾತು ಮರೆಸುತ್ತಾನೆ. ತಾನು ದೋಣಿಯಿಂದ ಹಾರಿದ ಕಾರಣಕ್ಕಾಗಿ ನೀವೆಲ್ಲ ಸುರಕ್ಷಿತರಾಗಿ ದಡ ಸೇರಿದಿರಿ ಎಂಬ ಮಾತೆಲ್ಲೂ ನುಸುಳುವುದಿಲ್ಲ. ಅಕ್ಷರದ ಶಿಕ್ಷಣವಿಲ್ಲದಿದ್ದರೂ, ಸರಳತೆಯ, ಜೀವನ ಮೌಲ್ಯದ ಪಾಠವನ್ನು ತನ್ನ ಅನುಭವದಿಂದಲೇ ಕಲಿತವನು. ಮನೆಯವರ ಸುರಕ್ಷತೆಗಾಗಿ ಮೌನವಾಗಿ ದೋಣಿಯಿಂದ ಜಿಗಿದ ಲಿಂಗನ ಪಾತ್ರ ನನ್ನ ಮನಸ್ಸಿನಲ್ಲಿ ಪದೇ ಪದೇ ಮೂಡುತ್ತದೆ. ಅವನ ನಿಸ್ಪೃಹ ವ್ಯಕ್ತಿತ್ವ ಆಗಾಗ ರೂಪು ಪಡೆಯುತ್ತದೆ.

●